# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 343

2) ಮಾನ್ಯ ಸದಸ್ಯರ ಹೆಸರು : ಡಾ|| ಕೆ.ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 29/01/2026

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಗಾಧವಾಗಿ ಬೆಳೆದಿರುವ ಮತ್ತು ನಿರಂತರವಾಗಿ ಬೆಳೆಯುತ್ತಲೇ ಇರುವ ಬೆಂಗಳೂರು ನಗರದ ಅಗತ್ಯಗಳನ್ನು ಪರಿಗಣಿಸಿ ಘನ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿದಂತೆ, ನಗರದಲ್ಲಿನ ಅಪರಾಧ, ಕಾನೂನು ಮತ್ತು ಸುವ್ಯವಸ್ಥೆ, ಸಂಚಾರ ಸಮಸ್ಯೆಗಳು ಮುಂತಾದವುಗಳನ್ನು ಪರಿಗಣಿಸಿ ಬೆಂಗಳೂರು ನಗರದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ; | ಬೆಂಗಳೂರು ನಗರದಲ್ಲಿನ ಅಪರಾಧ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಅಧೀನದಲ್ಲಿ 01-ಅಪರ ಪೊಲೀಸ್ ಆಯುಕ್ತರು ಅಪರಾಧ, 02-ಜಂಟಿ ಪೊಲೀಸ್ ಆಯುಕ್ತರು ಕಾನೂನು ಮತ್ತು ಸುವ್ಯವಸ್ಥೆ ಹಾಗೂ 01-ಜಂಟಿ ಪೊಲೀಸ್ ಆಯುಕ್ತರು ಸಂಚಾರ ರವರುಗಳ ಮೇಲುಸ್ತುವಾರಿಯಲ್ಲಿ 11-ಡಿ.ಸಿ.ಪಿ. (ಕಾನೂನು ಮತ್ತು ಸುವ್ಯವಸ್ಥೆ), 04-ಡಿ.ಸಿ.ಪಿ. (ಸಂಚಾರ) ಮತ್ತು 02-ಡಿ.ಸಿ.ಪಿ. (ಅಪರಾಧ) ವೃಂದದ ಅಧಿಕಾರಿಗಳಿಂದ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಲಾಗುತ್ತಿದೆ. ಆದಾಗ್ಯೂ, ಬೆಂಗಳೂರು ಪೊಲೀಸ್ ಆಯುಕ್ತಾಲಯವನ್ನು ಪುನರ್ ರಚಿಸುವ ಬಗ್ಗೆ, ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 24/12/2025ರಂದು ಜರುಗಿದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಚರ್ಚಿಸಿಲ್ಪಟ್ಟಂತೆ ಸಮಗ್ರ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾದ ನಂತರ ಪರಿಶೀಲಿಸಲಾಗುತ್ತದೆ. |
| ಆ) | ಪ್ರಸ್ತುತ 741 ಚದರ ಕಿಲೋ ಮೀಟರ್ ವಿಸ್ತೀರ್ಣವಿದ್ದು, 140 ಲಕ್ಷ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ 123 ಲಕ್ಷ ವಿವಿಧ ಬಗೆಯ ವಾಹನಗಳಿದ್ದು ಪ್ರತಿದಿನ ಸರಾಸರಿ 2000 ವಾಹನಗಳಂತೆ ತಿಂಗಳಿಗೆ 60,000 ವಾಹನಗಳು ಬೆಂಗಳೂರು ನಗರಕ್ಕೆ ಸೇರಲ್ಪಡುತ್ತಿವೆ. ದೇಶದಲ್ಲಿಯೇ ಅತ್ಯಧಿಕ ವಾಹನಗಳಿರುವ ನಗರಗಳ ಸಾಲಿನಲ್ಲಿ ಬೆಂಗಳೂರು 3ನೇ ಸ್ಥಾನದಲ್ಲಿದ್ದು ಉದ್ಯೋಗ, ಶಿಕ್ಷಣ, ವ್ಯಾಪಾರಕ್ಕೆಂದು ನಗರಕ್ಕೆ ಬರುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇರುವುದರಿಂದ ಬೆಂಗಳೂರು ನಗರವನ್ನು ಪುನರ್ ರಚಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಿದಂತೆ, ಬೆಂಗಳೂರು ಪೊಲೀಸ್ ಕಮಿಷನರೇಟನ್ನು ಪುನರ್ ರಚಿಸಿ ಪೊಲೀಸ್ ಆಯುಕ್ತರ ಮತ್ತೊಂದು ಹುದ್ದೆಯನ್ನು ಇನ್ನಿತರ ಪೂರಕ ಹುದ್ದೆಗಳೊಂದಿಗೆ ಹೊಸದಾಗಿ ಸೃಜಿಸಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಅವಶ್ಯಕತೆ ಇದ್ದು ಈ ಬಗ್ಗೆ ಸರ್ಕಾರ ತೀವ್ರವಾಗಿ ಚಿಂತನೆ ನಡೆಸಿದೆಯೇ; | |

| | | |
|---|---|---|
| ಇ) | ದೇಶದ ಕೆಲವು ನಗರಗಳಲ್ಲಿ ಎರಡು ಪೊಲೀಸ್ ಆಯುಕ್ತರ ಹುದ್ದೆಗಳು ಇರುವ ಹಿನ್ನಲೆಯಲ್ಲಿ ಸರ್ಕಾರ ಈ ಬಗ್ಗೆ ಕೂಡಲೇ ಕಾರ್ಯಪ್ರವೃತ್ತವಾಗಲಿದೆಯೇ? | ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 13 ಪಿಓಪಿ 2026**

(ಡಾ|| ಜಿ.ಪರಮೇಶ್ವರ)
ಗೃಹ ಸಚಿವರು.